ಸ್ವಾತಂತ್ರ್ಯ ಯೋಧರಿಗೆ ಕೆಲವು ಕನಿಷ್ಟ ಸೌಲಭ್ಯ ಒದಗಿಸಂವ ಬಗ್ಗೆ

೧೭೨ ಶ್ರೀ ಬಿ. ಹೆಚ್. ಯಂಕನಾಯಕ್ (ಹರಪನಹಳ್ಳಿ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಭಾರತಕ್ಕೆ ಸ್ವಾತಂತ್ರ್ಯ ಲಭಿಸಿ ೪೦ ವರ್ಷಗತಿಸಿದರೂ ಸ್ವಾತಂತ್ರ್ಯ ಹೋರಾಟಗಾರರು ನಿಜ ಜೀವನ ನಡೆಸಲು ತೊಂದರೆ ಅನುಭವಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ ಸದರಿ ಸ್ವಾತಂತ್ರ್ಯ ಯೋಧರಿಗೆ ಉಚಿತ ಬಸ್ ಪಾಸ್ ವೈದ್ಯಕೀಯ ಚಿಕಿತ್ಸೆ, ನಿವೇಶನ ಹಾಗೂ ಅವರ ಮಕ್ಕಳಿಗೆ ವ್ಯಾಸಂಗ ಮತ್ತು ನೌಕರಿಯಲ್ಲಿ ವಿಶೇಷಾತಿ ಸೌಲಭ್ಯ ಕಲ್ಪಿಸಿ ಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೆ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

ಅ) ಮತ್ತು ಆ) ಸರ್ಕಾರದ ಗಮನಕ್ಕೆ ಬಂದಿರುವ ಸ್ವಾತಂತ್ರ್ಯ ಯೋಧರ ಸಮಸ್ಯೆಗಳು ಸಾರ್ವಜನಿಕರ ಸಮಸ್ಯೆಗಳೂ ಆಗಿವೆ. ಸರ್ಕಾರವು ಇವರ ಸೌಲಭ್ಯಗಳನ್ನು ಸೇವೆಯನ್ನು ಪರಿಗಣಿಸಿ ಈಗಾಗಲೇ ಹಲವಾರು ಇವರಿಗೆ ಒದಗಿಸಿದೆ. ಇದನ್ನು ಅನುಬಂಧದಲ್ಲಿ ತೋರಿಸಿದೆ.

ಅನುಬಂಧ

೧ ಪ್ರವಾಸ ಸೌಲಭ್ಯಗಳು.

ರಾಜ್ಯ ಗೌರವಧನ ಪಡೆಯುವ ಸ್ವಾತಂತ್ರ್ಯ ಯೋಧರಿಗೆ ಅವರ ಜೀವಿತ ಅವಧಿಯಲ್ಲಿ ಒಂದು ಸಾರಿ ದ್ವಿತೀಯ ದರ್ಜೆ ರೈಲಿನಲ್ಲಿ ದೇಶದ ಯಾವುದೇ ಎರಡು ಸ್ಥಳಗಳ ನಡುವೆ ಉಚಿತ ಪ್ರಯಾಣ ಕೊಡಲು ಸರ್ಕಾರ ತೀರ್ಮಾನಿಸಿದೆ.

ಹಾಗೂ ಅವರಿಗೆ ವರ್ಷಕ್ಕೆ ಒಂದು ಬಾರಿ ಉಚಿತ ಪ್ರಯಾಣ ಸೌಲಭ್ಯವನ್ನು ಕೊಡಲು ತೀರ್ಮಾನಿಸಿದೆ.

(ಈ ಸೌಲಭ್ಯಗಳು ಅನುಷ್ಠಾನದ ಹಂತದಲ್ಲಿವೆ)

೨ ವೈದ್ಯಕೀಯ ಸೌಲಭ್ಯ.

ರೂ. ೩೬೦೦-೦೦ಕ್ಕಿಂತ ಕಡಿಮೆ ವಾರ್ಷಿಕ ಆದಾಯ ಇರುವಂತಹ ರಾಜ್ಯ ಗೌರವಧನ ಅಥವಾ ಕೇಂದ್ರ ಗೌರವಧನ ಪಡೆಯುವ ಸ್ವಾತಂತ್ರ್ಯ ಯೋಧರಿಗೆ ಹಾಗೂ ಅವರ ಹೆಂಡತಿ ಅಥವಾ ಅಪ್ರಾಪ್ತ ವಯಸ್ಕ ಮಕ್ಕಳಿಗೆ ರಾಜ್ಯ ಸರ್ಕಾರದ ನಿವೃತ್ತಿ ವೇತನದಾರರಿಗೆ ನೀಡುವಂತೆ ಉಚಿತ ವೈದ್ಯಕೀಯ ಸೌಲಭ್ಯ ನೀಡಲಾಗುತ್ತಿದೆ ಈ ಆದಾಯ ಮಿತಿಯನ್ನು ಹೆಚ್ಚಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

೩ ನಿವೇಶನ/ಮನೆಗಳು.

ಸ್ವಾತಂತ್ರ್ಯ ಯೋಧರಿಗೆ ನಿವೇಶನ ಮನೆಗಳನ್ನು ಹಂಚಿಕೆ ಮಾಡುವಲ್ಲಿ ಆದ್ಯತೆ ತೋರಿಸಲಾಗಿದೆ.

೪ ಶಿಕ್ಷಣ ಸೌಲಭ್ಯ.

ಸ್ವಾತಂತ್ರ್ಯ ಯೋಧರ ಮಕ್ಕಳಿಗೆ ತಾಂತ್ರಿಕ ಶಿಕ್ಷಣದಲ್ಲಿ, ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಹಾಗೂ ವೈದ್ಯಕೀಯ ಕಾಲೇಜುಗಳಲ್ಲಿ ಹಲವು ಸ್ಥಾನಗಳನ್ನು ಕಾದಿರಿಸಲಾಗಿದೆ. ವಾರ್ಷಿಕ ರೂ. ೩೬೦೦–೦೦ ಕ್ಕಿಂತ ಕಡಿಮೆ ಆದಾಯ ಇರುವ ಸ್ವಾತಂತ್ರ್ಯ ಯೋಧರ ಮಕ್ಕಳು ಕಾಲೇಜುಗಳಲ್ಲಿ ಫ್ರೀಷಿಪ್ ಡೆಂಟ್ ಶಿಪ್‌ಗೆ ಅರ್ಹರಾಗಿರುತ್ತಾರೆ.

೫ ಉದ್ಯೋಗದಲ್ಲಿ ಮೀಸಲಾತಿ.

ಈ ವಿಷಯವು ಸಂವಿಧಾನ ಬಾಹಿರವಾಗಿರುವುದರಿಂದ ಸರ್ಕಾರವು ಸ್ವಾತಂತ್ರ್ಯ ಯೋಧರ ಮಕ್ಕಳಿಗೆ ಉದ್ಯೋಗದಲ್ಲಿ ಯಾವುದೇ ಮೀಸಲಾತಿ ಮಾಡಿಲ್ಲ.

ಈ ಕೆಳಕಂಡ ಸೌಲಭ್ಯಗಳನ್ನು ಸಹ ಒದಗಿಸಲಾಗುತ್ತಿದೆ

೧ ಭೂ ಮಂಜೂರಾತಿ

ಸರ್ಕಾರಿ ಜಮೀನಿನಲ್ಲಿ ಶೇಕಡ ೧೦ರಷ್ಟು ಜಮೀನನ್ನು ಸ್ವಾತಂತ್ರ್ಯ ಯೋಧರಿಗೆ ಹಂಚಿಕೆ ಮಾಡುವಲ್ಲಿ ಕಾಯ್ದಿರಿಸಲಾಗಿದೆ ಮತ್ತು ಅದನ್ನು ಅವರಿಗೆ ಹಂಚಲಾಗುತ್ತಿದೆ.

೨ ಬ್ಯಾಂಕುಗಳ ಮೂಲಕ ಗೌರವಧನ ಪಡೆಯುವ ಬಗ್ಗೆ

ರಾಜ್ಯ ಗೌರವಧನ ಪಡೆಯುವ ಸ್ವಾತಂತ್ರ್ಯ ಯೋಧರುಗಳು ತಮ್ಮ ಗೌರವಧನ ಮೊತ್ತವನ್ನು ಖಜಾನೆ ಮುಖಾಂತರ ಯಾವುದೇ ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ಪಡೆಯುವಂತೆ ಅವಕಾಶ ಮಾಡಿಕೊಡಲಾಗಿದೆ.

೩ ಅಂತ್ಯಕ್ರಿಯೆ ವೆಚ್ಚ

ರಾಜ್ಯ ಗೌರವಧನ ಕೇಂದ್ರ ಗೌರವಧನ ಪಡೆಯುತ್ತಿರುವ ಸ್ವಾತಂತ್ರ್ಯ ಯೋಧರು ನಿಧನ ಹೊಂದಿದರೆ ಅಂತಹವರ ಕುಟುಂಬಕ್ಕೆ ಸ್ವಾತಂತ್ರ್ಯ ಯೋಧರ ಅಂತ್ಯಕ್ರಿಯೆಗೆ ರಾಜ್ಯ ಸರ್ಕಾರದ ವತಿಯಿಂದ ರೂ. ೧೦೦೦–೦೦ ಧನ ಸಹಾಯವನ್ನು ಬಿಡುಗಡೆ ಮಾಡಲಾಗುತ್ತಿದೆ, ಹಾಗೂ ಸಕಾಲದಲ್ಲಿ ನಿಧನದ ವಾರ್ತೆ ತಲುಪಿದ್ದಲ್ಲಿ ಸರ್ಕಾರದ ಪರವಾಗಿ ಸಂಬಂಧಪಟ್ಟ ತಹಶೀಲ್ದಾರ್‌ರವರು ಸ್ವಾತಂತ್ರ್ಯ ಯೋಧರ ಅಂತ್ಯಕ್ರಿಯೆಯಲ್ಲಿ ಭಾಗವಹಿಸುತ್ತಾರೆ ಮತ್ತು ಪುಷ್ಪಹಾರ ಅರ್ಪಿಸಿ ಸರ್ಕಾರದ ಗೌರವ ಸೂಚಿಸುತ್ತಾರೆ.

೪ ರಾಜ್ಯ ಗೌರವಧನ ಹೆಚ್ಚಳ

ಸ್ವಾತಂತ್ರ್ಯ ಯೋಧರರಿಗೆ ನೀಡುತ್ತಿರುವ ರಾಜ್ಯ ಗೌರವಧನವನ್ನು ದಿನಾಂಕ ೧–೯–೧೯೮೭ ರಿಂದ ಅನ್ವಯವಾಗುವಂತೆ ಮಾಹೆಯಾನ ರೂ. ೧೫೦–೦೦ ರಿಂದ ರೂ. ೨೦೦–೦೦ ರ ವರೆಗೆ ಹೆಚ್ಚಿಸಲಾಗಿದೆ.

೧೯೮೭–೮೮ನೇ ಸಾಲಿನಲ್ಲಿ ವರ್ಗಾವಣೆಯಿಂದ ಸರ್ಕಾರಕ್ಕೆ ಆಗಿರುವ ವೆಚ್ಚ

೬೫೫ ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೭–೮೮ನೇ ಸಾಲಿನಲ್ಲಿ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಆಗಿರುವ ವರ್ಗಾವಣೆಗಳೆಷ್ಟು (ಇಲಾಖಾವಾರು ಹಾಗೂ ವರ್ಗಾವಾರು ಸಂಖ್ಯೆಗಳನ್ನೊದಗಿಸುವುದು)

ಆ) ಮೇಲ್ಕಂಡ ವರ್ಗಾವಣೆಯಲ್ಲಿ ಅನುಸರಿಸಿರುವ ನಿಯಮಗಳೇನು?

ಇ) ಸದರಿ ವರ್ಗಾವಣೆಯಿಂದ ಸರ್ಕಾರದ ಬೊಕ್ಕಸಕ್ಕೆ ಆಗಿರುವ ವೆಚ್ಚವೆಷ್ಟು?